# <u>ಯಾರು ಬರುವರು ನಿನ್ನ ಹಿಂದೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 484.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 360
3. **Note:** Lyrics given here are as per Ref. 1. Lyrics in Ref. 2 are slightly different and are not considered here.
4. **Note:** Singer has followed these wordings.

ರಾಗ: ಯರಕಲಕಾಂಭೋಜಿ ತಾಳ: ತ್ರಿಪುಟ

ಯಾರು ಬರುವರು ನಿನ್ನ ಹಿಂದೆ || ಪ ||
ಇತ್ತ ಬಾರೆಂದು ಯಮಭಟರು ಸೆಳೆದೊಯ್ಯುವಾಗ || ಅಪ ||

ಸತಿ-ಸುತರುಗಳು ಬರುವುದಿಲ್ಲ, ನಿನ್ನ
ಹಿತವಾದ ಬಂಧು ಸ್ನೇಹಿತರು ಬರುವುದಿಲ್ಲ
ಕ್ಷಿತಿ ಮಾನ್ಯ ಕ್ಷೇತ್ರವು ಬರುವುದಿಲ್ಲ, ಲಕ್ಷ್ಮೀ-
ಪತಿಯೆಂಬವನಲ್ಲದೆ ಗತಿಯೊಬ್ಬರಿಲ್ಲ || 1 ||

ತುರಗ ಗಜಗಳು ಬರುವುದಿಲ್ಲ, ನಿನ್ನ
ಮೆರವಣಿಗೆ ಮಾಡುವ ಈ ತನು ನಿನ್ನದಲ್ಲ
ನರಪತಿಯ ಸೇವೆ ಸ್ಥಿರವಲ್ಲ, ನರ-
ಹರಿಯೊಬ್ಬನಲ್ಲದೆ ಪರಗತಿಯಿಲ್ಲ || 2 ||

ಧನ ಧಾನ್ಯಗಳು ಬರುವುದಿಲ್ಲ, ನಿನ್ನ
ಅನುವಾದ ನವ ಸಾಧನಗಳು ಬರುವುದಿಲ್ಲ
ಜನನಿ ಜನಕರು ಬರುವುದಿಲ್ಲ, ನಮ್ಮ
ಹನುಮನಯ್ಯನ ಹೊರತು ಬೇರೆ ಗತಿಯಿಲ್ಲ || 3 ||

ಈ ದೇಹ ನೀ ಬಿಟ್ಟ ಬಳಿಕ, ಅವರು

ಬಾಧೆಗೋಸ್ಕರ ಬೆಂಕಿ ಹಾಕಿ ಸುಡುತಿಹರೊ
ಬೂದಿ ನೀರೊಳು ಚೆಲ್ಲುತಿಹರೊ, ಬಂದು
ಬೀದಿಯಲಿ ನಿಂತು ಬೊಬ್ಬೆಯ ಮಾಡುತಿಹರೊ || 4 ||

ಇನ್ನಾದರು ತಿಳಿದುಕೊಂಡು, ಮತ್ತೆ
ಮುನ್ನಾದರು ಅನ್ಯ ಗತಿಯಿಲ್ಲವೆಂದು
ಎನ್ನೊಡೆಯ ನೀನೆ ಗತಿಯೆಂದು, ಬೇಡು
ಮನ್ನಿಸಿ ಪುರಂದರ ವಿಠಲ ಸಲಹೆಂದು || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

"ಪರಮಾತ್ಮನಲ್ಲಿ ಆಸಕ್ತಿ ಇದ್ದವರಿಗೆ ಸಂಸಾರದಲ್ಲಿ ವಿರಕ್ತಿ, ಸಂಸಾರದಲ್ಲಿ ಆಸಕ್ತಿಯಿದ್ದವರಿಗೆ ಪರಮಾತ್ಮನಲ್ಲಿ ವಿರಕ್ತಿ" ಎಂಬ ಮಾತಿದೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಮೊದಲ ಹೆಜ್ಜೆಯೇ ವಿರಕ್ತಿ. ಸಾತ್ತ್ವಿಕ ವರ್ಗಕ್ಕೆ ಸೇರಿದ ಜೀವರುಗಳಿಗೆ ಸಂಸಾರದ ದುಃಖದ ಅರಿವಿನಿಂದ (ದೋಷ ದರ್ಶನ) ಸಂಸಾರದಲ್ಲಿ ಹೇಯಬುದ್ಧಿ ಒದಗುತ್ತದೆ. ಅದರಲ್ಲಿ ತೊಡಗಿರಬೇಕೆಂಬ ತವಕ ತಪ್ಪುತ್ತದೆ. ವಿಷಯಗಳಿಗೆ ವಿಮುಖವಾಗಿರುವುದೇ (ವಿ-ರಕ್ತಿ) ವಿರಕ್ತಿಯ ಮುಖ್ಯ ಲಕ್ಷಣವಾದರೂ, ವಿಷಯ ವಾಸನೆ ಮನಸ್ಸಿನಿಂದ ತೊಲಗಿ ಹೋಗುವವರೆಗೆ ವಿಷಯ ವೈಮುಖ್ಯ ಧೃಢವಾಗುವುದಿಲ್ಲ, ಫಲಕಾರಿಯಾಗುವುದಿಲ್ಲ.

**ಕ್ಷಿತಿ** = ಭೂಮಿ, ಮನೆ, ನಿವಾಸ

**Classification:** Keerthane
**Ankita:** purandara vittala
**Location:** NA
**Category:** Virakti, mukti marga
**Sub-Category:** yama, patni, maga, bandhu, mitra, Vishnu, kudure, gaja, pati, Narasimha, rokka, dhaanya, tayi, tande, deha, sudu, niru, mukti,
**Pravachana:** NA
**Explanation:** NA